# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 528
2. ಸದಸ್ಯರ ಹೆಸರು : ಶ್ರೀ ಎಂ.ಎ. ಗೋಪಾಲಸ್ವಾಮಿ(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು
3. ಉತ್ತರಿಸುವ ದಿನಾಂಕ: : 24.09.2020
4. ಉತ್ತರ ನೀಡುವವರು : ಮಾನ್ಯ ಮುಖ್ಯ ಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ಸರ್ಕಾರದ ಅನೇಕ ಇಲಾಖೆಗಳು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕಳೆದ ವರ್ಷ ನೀಡಿರುವ ಬಹುತೇಕ ಆಡಳಿತಾತ್ಮಕ ಅನುಮೋದನೆ/ಆದೇಶಗಳಿಗೆ ಆರ್ಥಿಕ ಇಲಾಖೆಯು ತಡೆನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಸಂಬಂಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು: (ವಿವರ ನೀಡುವುದು) | ಅಭಿವೃದ್ಧಿ ಕಾಮಗಾರಿಗಳಿಗೆ ಆರ್ಥಿಕ ಇಲಾಖೆಯಿಂದ ತಡೆ ನೀಡಿರುವುದಿಲ್ಲ. ಆದರೆ, ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ:ಆಇ 02 ಟಿಎಫ್ ಪಿ 2020, ದಿನಾಂಕ: 04.05.2020ರನ್ವಯ ಯಾವುದೇ ಕಾಮಗಾರಿಗೆ ಟೆಂಡರ್ ಆಗಿ ಕಾರ್ಯದೇಶ ನೀಡಿ, ಕಾಮಗಾರಿ ಇನ್ನೂ ಕಾರ್ಯಾರಂಭ ಆಗದೇ ಇದ್ದಲ್ಲಿ, ಇವುಗಳನ್ನು ಪ್ರಾರಂಭಿಸಲು ಆರ್ಥಿಕ ಇಲಾಖೆಯ ಪೂರ್ವ ಅನುಮೋದನೆ ಪಡೆಯಲು ಸೂಚಿಸಲಾಗಿದೆ. |
| (ಆ) | ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಗಳಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪಡೆದಿರುವ ಆಡಳಿತಾತ್ಮಕ ಅನುಮೋದನೆ/ಆದೇಶಗಳಿಗೆ ಆರ್ಥಿಕ ಇಲಾಖೆಯು ತಡೆ ನೀಡಿದೆಯೇ; ನೀಡಿದ್ದಲ್ಲಿ, ಯಾವ ಯಾವ ಇಲಾಖೆಯ ಆದೇಶಗಳಿಗೆ ತಡೆ ನೀಡಲಾಗಿದೆ; ಈ ತಡೆ ಆದೇಶಗಳನ್ನು ಯಾವಾಗ ರದ್ದುಗೊಳಿಸಲಾಗುವುದು; (ವಿವರ ನೀಡುವುದು) | ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಗಳಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪಡೆದಿರುವ ಆಡಳಿತಾತ್ಮಕ ಅನುಮೋದನೆ/ಆದೇಶಗಳಿಗೆ ಆರ್ಥಿಕ ಇಲಾಖೆಯು ತಡೆ ನೀಡಿರುವುದಿಲ್ಲ. |

| | | |
|---|---|---|
| (ಇ) | ಅನುದಾನಿತ ಶಾಲೆ ಮತ್ತು ಕಾಲೇಜುಗಳಲ್ಲಿ ಖಾಲಿ ಇರುವ ಬ್ಯಾಕ್–ಲಾಕ್ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯು ತಡೆ ನೀಡಿದೆಯೇ: ನೀಡಿದ್ದಲ್ಲಿ ಈ ತಡೆ ಆದೇಶಗಳನ್ನು ಯಾವಾಗ ರದ್ದುಗೊಳಿಸಲಾಗುವುದು? | ಕೋವಿಡ್–19 ಮಹಾಮಾರಿಯಿಂದಾಗಿ ರಾಜಸ್ವ ಸಂಗ್ರಹಣೆಯಲ್ಲಿ ತೀವ್ರ ಕುಸಿತಗೊಂಡು ಆರ್ಥಿಕ ಸಂಕಷ್ಟ ಎದುರಾಗಿರುತ್ತದೆ. ಆದ್ದರಿಂದ ಬ್ಯಾಕ್–ಲಾಗ್ ಹುದ್ದೆಗಳು ಸೇರಿದಂತೆ ಎಲ್ಲಾ ನೇರ ನೇಮಕಾತಿಯನ್ನು ದಿನಾಂಕ: 06.07.2020 ರಂದು ಆರ್ಥಿಕ ಇಲಾಖೆಯಿಂದ ಹೊರಡಿಸಲಾದ ಸುತ್ತೋಲೆ ಸಂಖ್ಯೆ:ಆಇ 03 ಬಿ.ಇ.ಎಂ 2020 ರನ್ವಯ ತಡೆಹಿಯಲಾಗಿರುತ್ತದೆ. ಕೋವಿಡ್–19 ಸಾಂಕ್ರಾಮಿಕ ರೋಗವು ದಿನೇ ದಿನೇ ಹೆಚ್ಚುತ್ತಿರುವುದರಿಂದ ಈ ಹಂತದಲ್ಲಿ ಸುತ್ತೋಲೆಯನ್ನು ಹಿಂಪಡೆಯುವುದು ಕಷ್ಟಸಾಧ್ಯವಾಗಿರುತ್ತದೆ. |

ಸಂಖ್ಯೆ: ಆಇ 166 ಸಿಡಿಎನ್ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ